ರಿಗೆ ಮತ್ತು ಮಧ್ಯಮ ವರ್ಗದ ಜನರಿಗೆ ಇಂತಹ ಸೌಲಭ್ಯವನ್ನು ಹೌಸಿಂಗ್ ಬೋರ್ಡಿನಲ್ಲಿ ಕೊಡುವ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರಾದ ಶ್ರೀಮಾನ್ ಪತ್ತಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಹೌಸಿಂಗ್ ಸೊಸೈಟಿ ಇದೆ. ತಾವು ಅವರನ್ನು ಸಂಪರ್ಕ ಮಾಡಿದರೆ ಅನುಕೂಲವಾಗಬಹುದು.

Starting of Three new University in the State

583. SRI S. M. SHEERNALY CHANDRASHEKAR (Hosanagar).—Will the Minister for Eduction be pleased to state.—

(a) whether the Government is aware that the report submitted to the Government have to start three Universities, one at Gulbarga another at Shimoga and another at Mangalore;

(b) if so, why Government had started only two Universities;

(c) whether the Government is aware that it has assured this House on the last occasion that it will pass suitable orders to start Sahyadri University at Shimoga;

(d) if so, whether the Government will start this year, itself?

SRI G. B. SHANKAR RAO (Minister for Eduction).—

(a) Sbri D. V. Urs in his One Man Commission report suggested that there are some advantages in starting of a University at Shimoga in addition to the starting of two new Universities at Mangalore and Gulbarga.

(b) Since Government is facing financial difficulties in respect of the two new Universities which have started functioning, the proposal to start one more University at Shimoga cannot be considered for the present.

(c) No

(d) Does not arise in view of the reply to Clause (b).

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಶಿಕ್ಷಣ ಸಚಿವರ ನಿರ್ಲಂನೇ ಇಸವಿಯಲ್ಲಿ ನನ್ನ ಪ್ರಶ್ನೆಗೆ ಉತ್ತರವನ್ನು ಈ ರೀತಿ ಕೊಟ್ಟಿದ್ದರೆ. ಮಾನ್ಯ ಸದಸ್ಯರ ಪ್ರಾರ್ಥನೆಯನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದರೆ. You have given an assurance in this august House that next year you will try to establish a University at Shimoga. ಈ ಸದನದ ಮುಂದೆ ಕೊಟ್ಟಿರತಕ್ಕಂತಹ ಆಶ್ವಾಸನೆಗೆ ಏನೂ ಬೆಲೆ ಇಲ್ಲವೆ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ನಾನು ಕೊಟ್ಟಿರುವ ಉತ್ತರವನ್ನು ಸರಿಯಾಗಿ ಓದಬೇಕು. ನಾನು ಉತ್ತರವನ್ನು ಕೊಡುವಾಗ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದೇನೆ. ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್. - ಮಾನ್ಯ ಸಚಿವರು ಶಾಸನ ಸಭೆಯಲ್ಲಿ ಕೊಟ್ಟಿರತಕ್ಕಂತಹ ಉಚ್ಚ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ಯಾವ ಹಂತದಲ್ಲಿ ಪ್ರಯತ್ನ ಮಾಡುತ್ತಿದ್ದೀರಿ ?

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಸದಸ್ಯರು ಹಿಂದಿನ ಸಭೆಯಲ್ಲಿ ಒಂದು ಖಾಸಗೀ ನಿರ್ಣಯವನ್ನು ತಂದಿದ್ದರು. ಆ ಖಾಸಗೀ ನಿರ್ಣಯಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಅದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಶಿವಮೊಗ್ಗ ಜಿಲ್ಲೆಯಲ್ಲಿ ಮಂತ್ರಿಮಂಡಲ ಸಭೆ ಕಳೆದ ತಿಂಗಳಿ, ನಿಂದಲೂ ಮುಂದುವರಿಯುತ್ತಲೇ ಇದೆ. ಆದರೆ ಈ ತಿಂಗಳ ೧೯ನೇ ತಾರೀಖು ಶಿವಮೊಗ್ಗದಲ್ಲಿ ಮಂತ್ರಿ ಮಂಡಲದ ಸಭೆ ನಡೆಯುತ್ತದೆ ಎಂದು ಗೊತ್ತಾಗಿದೆ. ಆ ಮಂತ್ರಿಮಂಡಲದ ಸಭೆಯಲ್ಲಿ ಈ ವಿಷಯವನ್ನು ಗೌಪ್ಯವಾಗಿ ಇಟ್ಟುಕೊಂಡು ಅಲ್ಲಿ ಅನೌನ್ಸ್ ಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಶೀರ್ವಾಳಿ ಚಂದ್ರಶೇಖರ್‌ರವರ ಪ್ರಶ್ನೆಗೆ ಈಗಲೇ ಹೌದು ಎಂದು ಉತ್ತರ ಹೇಳಿದರೆ ಅದರ ಚಾರಂ ಹೊರಟು ಹೋಗುತ್ತದೆ ಎನ್ನುವ ಭಾವನೆ ಏನಾದರೂ ಸರ್ಕಾರಕ್ಕೆ ಇದೆಯೇ ?

ಶ್ರೀ ಜಿ.ಬಿ. ಶಂಕರ್‌ರಾವ್.—ಒಂದು ಗಾದೆ ಹೇಳುತ್ತಾರೆ. ಮನಸ್ಸಿನಲ್ಲಿ ಮಂಡಿಗೆ ಹಾಕಿಕೊಂಡರೆ ಗೋಧಿಯನ್ನು ಕೊಳ್ಳುವವರು ಯಾರು ಎಂದು ? ಆದ್ದರಿಂದ ನಾವು ಈ ವಿಷಯವನ್ನು ಆಲೋಚನೆ ಮಾಡಿಲ್ಲ.

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.—೧೯೮೦ನೇ ಇಸವಿಯಲ್ಲಿ ತಾವು ನಿರ್ಣಯದ ಮೇಲೆ ಮಾತನಾಡುವಾಗ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೀರಿ. ಅದು ಏನೆಂದರೆ ಮಾನ್ಯ ಸದಸ್ಯರ ಪ್ರಾರ್ಥನೆಯನ್ನು ಈಡೇರಿಸಲು ಪ್ರಯತ್ನ ಮಾಡುತ್ತೇನೆ ಎಂದು. ಆದರೆ ೧೯೮೦ನೇ ಇಸವಿಯಿಂದ ೧೯೮೨ನೇ ಇಸವಿಗೆ ಸುಮಾರು ೨ ವರ್ಷಗಳಾಯಿತು. ತಮ್ಮ ಪ್ರಯತ್ನ ಯಾವ ಹಂತದಲ್ಲಿದೆ ?

ಶ್ರೀ ಜಿ. ಬಿ. ಶಂಕರರಾವ್.—ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದೇನೆ. ಆದರೆ ಭರವಸೆಯನ್ನು ಕೊಟ್ಟಿಲ್ಲ. ನಮ್ಮ ಪ್ರಯತ್ನದ ಹಂತದಲ್ಲಿ ಹಣಕಾಸಿನ ಅನುಕೂಲತೆಯನ್ನು ಅವಲಂಬಿಸಿದೆ.

ಅಧ್ಯಕ್ಷರು.—ಪ್ರಯತ್ನಕ್ಕೆ ಕೊನೆ ಮೊದಲು ಎಲ್ಲಿ ಇದೆ ?

ಶ್ರೀ ಜಿ. ಬಿ. ಶಂಕರ್‌ರಾವ್.—ಪ್ರಯತ್ನಕ್ಕೆ ಕೊನೆ ಮೊದಲು ಇಲ್ಲವೇ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಈಗ ಸದ್ಯದ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ಮಾನ್ಯ ವಿದ್ಯಾ ಮಂತ್ರಿಗಳು ಹೇಳಿದ್ದಾರೆ. ಆದರೆ ಈ ಪ್ರಶ್ನೆಯನ್ನು ತೀರ್ಮಾನ ಮಾಡಿಯಾರಿಯೇ ?

ಅಧ್ಯಕ್ಷರು.—ಪ್ರಯತ್ನದ ಹಿನ್ನೆಲೆಯಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಈ ಪ್ರಶ್ನೆಯನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದರೆ ಏನಾದರೂ ತೀರ್ಮಾನವಾಗಬಹುದು. ಆದರೆ ಮಾನ್ಯ ವಿದ್ಯಾಮಂತ್ರಿ ಪ್ರಯತ್ನ ಮಾಡಿದರೆ ಏನೂ ಆಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾ ನಿಲಯವನ್ನು ಸ್ಥಾಪನೆ ಮಾಡಲು ಶಿವಮೊಗ್ಗ ಮಂತ್ರಿ ಮಂಡಲದ ಸಭೆಯಲ್ಲಿ ವಿಚಾರ ಮಾಡಲು ಆಲೋಚಿಸಿದ್ದಾರೆಯೇ ?

ಶ್ರೀ ಆರ್ ಗುಂಡೂರಾವ್.— ಆ ಬಗ್ಗೆ ಇನ್ನೂ ಏನೂ ಯೋಚನೆ ಮಾಡಿಲ್ಲ.

ಶ್ರೀ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್.—ನಾನು ೧೯೮೦ನೇ ಇಸವಿಯಲ್ಲಿ ಒಂದು ನಿರ್ಣಯವನ್ನು ತಂದಾಗ ಒಂದು ಆಶ್ವಾಸನೆಯನ್ನು ಮಾನ್ಯ ವಿದ್ಯಾ ಮಂತ್ರಿಗಳು ಕೊಟ್ಟಿದ್ದಾರೆ. ಆ ಆಶ್ವಾಸನೆ ಫಲಪ್ರದವಾಗಲು ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ ? You have given an assurance again that you will try to establish a university at Shimoga. This is an assurance given on the floor of this House. I had moved a resolution. I was asked to withdraw the resolution on that assurance. ಈ ಶಾಸನ ಸಭೆಯಲ್ಲಿ ಕೊಟ್ಟ ಆಶ್ವಾಸನೆಗಳಿಗೆ ಯಾವ ಕಿಮ್ಮತ್ತು ಇಲ್ಲವೆ ?

ಶ್ರೀ ಜಿ. ಬಿ. ಶಂಕರರಾವ್.—ಕನ್‌ಸೀಡರ್ ಎಂದರೆ ಮಾನ್ಯ ಸದಸ್ಯರು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಈ ವಿಷಯವನ್ನು ಆಲೋಚನೆ ಮಾಡುತ್ತೇವೆ ಎಂದು ಹೇಳುವ ಮಾತು. ಇದನು ಅರ್ಥ ಮಾಡಿಕೊಳ್ಳಬೇಕು ಸರ್ಕಾರದವರು ಏಕ ಸದಸ್ಯರ ಆಯೋಗವನ್ನು ನೇಮಕ ಮಾಡಿತ್ತು. ಅವರು ಧಾರವಾಡ ಮತ್ತು ಮೈಸೂರು, ಹುಬ್ಬಳ್ಳಿಗಳಲ್ಲಿ ಕಾಲೇಜುಗಳು ಜಾಸ್ತಿ ಇರುವುದರಿಂದ

ಗುಲ್ಬರ್ಗ ಮತ್ತು ಮಂಗಳೂರು, ಶಿವಮೊಗ್ಗಗಳಲ್ಲಿ ಅವಶ್ಯಕತೆ ಇದ್ದರೆ ೩ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಬಹುದೆಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯ ಮೇರೆಗೆ ಮಾನ್ಯ ಸದಸ್ಯರು ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಒತ್ತಾಯವನ್ನು ತಂದಿದ್ದಾರೆ. ಆದರೆ ನಾವು ಈಗಾಗಲೇ ೨ ವಿಶ್ವವಿದ್ಯಾನಿಲಯಗಳನ್ನು ಗುಲ್ಬರ್ಗ ಮತ್ತು ಮಂಗಳೂರಿನಲ್ಲಿ ಸ್ಥಾಪನೆ ಮಾಡಿದ್ದೇವೆ. ಈ ವಿಶ್ವವಿದ್ಯಾನಿಲಯಗಳಿಗೆ ಹಣಕಾಸಿನ ಪರಿಸ್ಥಿಟ್ಟನ್ನು ಸರ್ಕಾರ ಎದುರಿಸುತ್ತಿದೆ. ನಾವು ೪ ಕೋಟಿ ರೂಪಾಯಿಗಳನ್ನು ಎರಡೂ ವಿಶ್ವವಿದ್ಯಾನಿಲಯಗಳಿಗೆ ಖರ್ಚು ಮಾಡಿದ ಮೇಲೆ ನಮಗೆ ಸಹಾಯಧನ ಬರುತ್ತದೆ. ಆಲ್ಲಿಯವರಿವಿಗೂ ಸಹಾಯಧನ ಬರುವುದಿಲ್ಲ. ಆದ್ದರಿಂದ ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯವನ್ನು ಸದ್ಯಕ್ಕೆ ಸ್ಥಾಪನೆ ಮಾಡುವುದಕ್ಕೆ ಆಗುವುದಿಲ್ಲ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಪರಿಶೀಲನೆ ಮಾಡೋಣ. ಸರ್ಕಾರ ಪ್ರಯತ್ನ ಮಾಡುತ್ತದೆ. ಕೈ ಬಿಡುವುದಿಲ್ಲ.

ಶ್ರೀ ಜಿ. ರಾಮೇಗೌಡ.—ಮಂಗಳೂರು ಮತ್ತು ಗುಲ್ಬರ್ಗದಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವಾಗ ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕು ಎಂಬ ಒತ್ತಾಯ ಸರ್ಕಾರದಲ್ಲಿ ಇದ್ದುದ್ದು ತಮ್ಮ ಗಮನದಲ್ಲಿ ಇರಲಿಲ್ಲವೇ ? ಶಿವಮೊಗ್ಗ ವಿಶ್ವವಿದ್ಯಾನಿಲಯವನ್ನು ಕೈ ಬಿಡುವುದಕ್ಕೆ ಹಣಕಾಸಿನ ಕೊರತೆ ಇದೆಯೇ ? ಅಥವಾ ರಾಜಕೀಯ ಒತ್ತಡ ಇದೆಯೇ ?

SRI G. B. SHANKARA RAO.—I have already made it clear in the House that the appointment of one man commission was only with regard to the working of the two universities i.e. Dharwar and Mysore, and the proposals to start two new universities, ono at Gulbarga and one at Mangalore. Nowhere at any time we had an idea to establish a university at Shimoga. But the one man commission made a suggestion to have a university at Shimoga also because of some advantages (like land) that were available there. Also there are nearly 37 colleges in the jurisdiction if the university at Shimoga is established. The Commission made a passing reference, nodoubt. But it was only a passing reference and nowhere at any time we had a proposal for starting of a university at Shimoga.

ಶ್ರೀ ಎಸ್. ಎಸ್. ಅವಟೇರಿ.—ಸರ್ಕಾರಕ್ಕೆ ನಾವು ೧೨೦–೧೫೦ ಜನರ ಶಾಸಕರ ಸಹಿಯನ್ನು ಮಾಡಿಸಿಕೊಂಡು ಬಂದು ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಬಸವೇಶ್ವರ ವಿಶ್ವವಿದ್ಯಾನಿಲಯವನ್ನಾಗಿ ಮತ್ತು ಅಗ್ರಿಕಲ್ಚರ್ ಕಾಲೇಜಿಗೆ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಎಂದು ನಾಮಕರಣ ಮಾಡ ಬೇಕೆಂದು ಕೇಳಿದ್ದೆವು ಇದನ್ನು ಯಾವಾಗ ಮಾಡ ತ್ತೀರಿ ಎಂಬುದನ್ನು ತಿಳಿಸುತ್ತೀರಾ ?

MR. SPEAKER.—That is a different matter.

SRI G. B. SHANKARA RAO.—Of course these suggestions were made. But the time was not opportune to name these two universities i.e. Gulbarga and Mangalore after these two persons.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಮ್ಮ ಹಿರಿಯ ಸದಸ್ಯರಾದ ಶ್ರೀ ಜಿ. ರಾಮೇಗೌಡರು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಆದರೆ ಮಾನ್ಯ ವಿದ್ಯಾಮಂತ್ರಿಗಳಿಂದ ಇದು ಆಗುವುದಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗಿದೆ. ಪ್ರತ್ಯು ಮಾನ್ಯ ಮುಖ್ಯಮಂತ್ರಿಗಳು ಬರುವ ಮಂತ್ರಿಮಂಡಲದ ಸಭೆಯಲ್ಲಿ ಸ್ಥಾಪನೆ ಮಾಡುವ ಯೋಚನೆ ಇಲ್ಲ ಎಂದರಿ ಹೇಳಿದ್ದಾರೆ. ಆದರೂ ಕೂಡ ನಾನು ಒತ್ತಾಯಪೂರ್ವಕವಾಗಿ ಕೇಳುತ್ತಿದ್ದೇನೆ. ಮತ್ತು ನಮ್ಮ ಮನಸ್ಸಿನಲ್ಲಿ ಮಂಡಿಗೆ ಇಲ್ಲ. ನೀವು ಯಾರನ್ನು ಜವಾಬ್ದಾರಿಯುತ ವ್ಯಕ್ತಿಗಳೆಂದು ಇಟ್ಟುಕೊಂಡಿದ್ದೀರೋ ಅವರೇ ಹೇಳಿದ್ದಾರೆ ಮುಂದಿನ ಮಂತ್ರಿಮಂಡಲದ ಸಭೆಯಲ್ಲಿ ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇವೆ ಎಂದು ಇದನ್ನು ಜನರು ನಂಬಿಕೊಂಡಿದ್ದಾರೆ. ಇದಕ್ಕೆ ಮಾನ್ಯ

ಮುಖ್ಯಮಂತ್ರಿಗಳು ಏನು ಹೇಳುತ್ತಾರೆ. ಅವನ್ನು ದೃಢಭಕ್ತಿಯಿಂದ ನಂಬಿಕೊಂಡಿದ್ದಾರೆ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಅದನ್ನು ಪರಿಶೀಲನೆ ಮಾಡುವುದಕ್ಕೆ ಮಾನ್ಯ ಶಂಕರರಾಯರ ಹಾಗೆ ಅಷ್ಟು ಹೊತ್ತು ಬೇಡ. ಈಗ ೧೯ನೇ ತಾರೀಖಿನೊಳಗೆ ಮನಸ್ಸು ಮಾಡಿದರೆ ಇದರ ಬಗ್ಗೆ ನಿರ್ಧಾರ ಮಾಡುವುದಕ್ಕೆ ಸಾಧ್ಯವಿದೆ. ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ, ಆ ರೀತಿ ಭರವಸೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಆ ರೀತಿ ಮನಸ್ಸು ಮಾಡುವುದಕ್ಕೆ ಏನು ತೊಂದರೆ ಇದೆ ಎಂದು ತಿಳಿಸಲಿ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ನಾನು ಈ ಸದನದಲ್ಲಿ ಬುರುಡೆ ಬಿಡುತ್ತಾ ಇಲ್ಲ. ಮಾನ್ಯ ಮಂತ್ರಿಗಳು ಪ್ರತಿ ವರ್ಷ ಸತತವಾಗಿ ಆಶ್ವಾಸನೆ ಕೊಡುತ್ತಾ ಬಂದಿದ್ದಾರೆ. ಪ್ರತಿ ವರ್ಷ ಆಶ್ವಾಸನೆ ಇದ್ದೇ ಇದೆ. ಶಿವದೊಗ್ಗದಲ್ಲಿ ವಿಶ್ವವಿದ್ಯಾನಿಲಯ ಮಾಡುವುದಕ್ಕೆ ಏನು ಕಷ್ಟವಿದೆ. ಅಲ್ಲಿ ಇಂಜಿನಿಯರಿಂಗ್ ಕಾಲೇಜು ಇದೆ, ಪ್ರತಿಯೊಂದೂ ಕಾಲೇಜು ಇದೆ. ವಿಶ್ವವಿದ್ಯಾನಿಲಯ ಎಂದು ನಾಮಕರಣ ಮಾಡುವುದಷ್ಟೇ ನಿಮ್ಮಿಂದ ಆಗಬೇಕಾದುದು ; ಹೊಸದಾಗಿ ತೆಗೆಯಬೇಕಾದುದಿಲ್ಲ. ಆದುದರಿಂದ ದೊಡ್ಡ ಮನಸ್ಸು ಮಾಡಿ ೧೯ನೇ ತಾರೀಖಿನ ರಾಜ್ಯದ ಸಂಪುಟ ಸಭೆಯಲ್ಲಿ ಅನೌನ್ಸ್ ಮಾಡುತ್ತೀರಾ ?

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೆ, ಶಿಕ್ಷಣ ಕ್ಷೇತ್ರ ಬೆಳೆದಹಾಗೆ, ಮಹಾ ವಿದ್ಯಾಲಯಗಳು ಬೆಳೆದಹಾಗೆ ನಾವು ಇಂತಹ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಲಿಕ್ಕೆ ಅಡ್ಡಿ ಇಲ್ಲ ಎಂಬ ಮಾತನ್ನು ಸ್ಪಷ್ಟಪಡಿಸುತ್ತೇನೆ. But at the same time we have to look into other academic aspects, number of colleges in that region *etc.*, plus. We have to look into the financial position of the Government also. ನಾವು ಗುಲ್ಬರ್ಗ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡುವಾಗ ನಮಗೆ ಇದ್ದಂಥ ಪರಿಸ್ಥಿತಿಯಲ್ಲಿ ನಾವು ಪ್ರತಿಯೊಂದು ವಿಶ್ವವಿದ್ಯಾನಿಲಯಕ್ಕೆ ಒಂದೊಂದು ಕೋಟಿ ಖರ್ಚು ಮಾಡತಕ್ಕಂಥ ಸಂದರ್ಭವಿದ್ದಾಗ ಳ ಕೋಟಿವರೆಗೆ ಮುಟ್ಟಲಿಲ್ಲ. ಇನ್ನು ಅಭಿವೃದ್ಧಿ ಪಡಿಸಬೇಕಾದರೆ ಕೋಟ್ಯಾಂತರ ರೂಪಾಯಿಗಳ ದುಡ್ಡು ಬೇಕಾಗುತ್ತದೆ. ಇದಾದಮೇಲೆ ಯು.ಬಿ.ಸಿ. ಸಹಾಯ ಮಾಡುತ್ತದೆ. ನಾವು ಯು.ಬಿ ಸಿ. ಯನ್ನು ಕೇಳಬೇಕಾಗುತ್ತದೆ, ನಾವು ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳಬೇಕಾಗುತ್ತದೆ. ಆದುದರಿಂದ ನಾವು ಇದರ ಬಗ್ಗೆ ಸದ್ಯಕ್ಕೆ ಆಲೋಚನೆ ಮಾಡಿಲ್ಲ. ಮುಂದೆ ಹಣಕಾಸಿನ ಪರಿಸ್ಥಿತಿಯನ್ನು ನೋಡೋಣ.

Vehicles Ply Jaily on Kalburgi-jadapura Road in Afzalpur Taluk

704 SRI M. Y. PATIL (Afzalpur).—Will the Minister for Public Works be pleased to state.—

(a)whether it has come to the notice of Government the number of vehicles ply daily on Kalburgi-Jadapura Road in Afzalpur Taluk ;

(b) whether it is a fact, that the dimension of Kalburgi-Jadapur Road is not fit for vehicular traffic ;

(c) if so, action taken to complete the same as tar road during this year ?

SRI KAGODU THIMMAPPA (Minister for Public Works).—

(a) Yes. Daily 171 vehicles-ply on this road (based on the enumeration conducted on 21-1-1981). The width of this Road is 24 Feet and its length is 33.50 K. M.